ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೨೪ನೇ ಮಾರ್ಚ್ ೧೯೯೫, ಫಾಲ್ಗುಣ, ಶಕ ೧೯೧೬

ಸದನವು ವಿಧಾನ ಸೌಧದದಲ್ಲಿರುವರು ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : ಶ್ರಿ **ರಮೇಶ್ ಕುಮಾರ್** ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಕೆ.ಜಿ. ಶ್ರೀನಿವಾಸ ಮೂರ್ತಿಯವರು ದಿನಾಂಕ 18-3-95ರಂದು ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ. ಶ್ರೀಯುತರು 7ನೇ ವಿಧಾನ ಸಭೆಗೆ ಸಾತನೂರು ಕ್ಷೇತ್ರವನ್ನು ಪ್ರತಿ ನಿಧಿಸಿದ್ದರು. ಭಾರತ ಸೇವಾದಳದ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ರಾಜ್ಯದ ಸಹಕಾರ ಸಂಘದ ಖಜಾಂಚಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ಮೃತರ ಗೌರವಾನ್ವಿತ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಕಾಲ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ದಿವಂಗತರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ತುಮಕೂರು ರಂಗಮಂದಿರಕ್ಕೆ ಖರ್ಚು ಮಾಡಿರುವ ಹಣ

389 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಿಂಬೆಳ್ಳ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ರಂಗಮಂದಿರಕ್ಕೆ ವಿರ್ಚಾಗಿರುವ ಒಟ್ಟು ಹಣ ಎಷ್ಟು? ಹಾಗೂ ಈ ಹಣ ಬಂದಿರುವ ಮೂಲಗಳು ಯಾವುವು ಹಾಗೂ ಸರ್ಕಾರದ ಪಾಲು ಇದರಲ್ಲಿ ಎಷ್ಟು?

ಆ) ವಿವಿಧ ಇಲಾಖೆಗಳು ಈ ಕಾರ್ಯಕ್ಕೆ ಸಂಗ್ರಹಿಸಿಕೊಟ್ಟ ಹಣ ಎಷ್ಟು?

ಇ) ವಿವಿಧ ಇಲಾಖೆ ಅಧಿಕಾರಿಗಳು ಹಣ ಸಂಗ್ರಹಿಸಲು ಸರ್ಕಾರದಿಂದ ಪೂರ್ವಾನುಮತಿ ಪಡೆದಿರುವರೆ?

ಈ) ಹಾಗಿದ್ದಲ್ಲಿ ಸಂಗ್ರಹಿಸಲಾಗಿರುವ ಹಣಕ್ಕೆ ಸರಿಯಾಗಿ ಲೆಕ್ಕಪತ್ರಗಳನ್ನು ಇಡಲಾಗಿದೆಯೇ? (ವಿವರಗಳನ್ನು ತಿಳಿಸುವುದು)

ಶ್ರೀಮತಿ ಬಿ.ಟಿ. ಲಲಿತಾನಾಯಕ್ (ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ರೂ. 90.00 ಲಕ್ಷ

ಈ ಹಣದಲ್ಲಿ ಸರ್ಕಾರದ ವಂತಿಗೆ 27.56 ಲಕ್ಷ ರೂ.ಗಳು ಹಣದ ಇತರ ಮೂಲದ ವಿವರಗಳು ಅನುಬಂಧದಲ್ಲಿ ಕೊಡಲಾಗಿದೆ.

ಆ) ರೂ. 22.10 ಲಕ್ಷ

ಇ) ಜಿಲ್ಲಾ ರಂಗಮಂದಿರದ ಸಮಿತಿಯ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಹಣ ಸಂಗ್ರಹಿಸಲು ಸರ್ಕಾರ ಅನುಮತಿ ನೀಡಿದೆ.

ಈ) ಇಡಲಾಗಿದೆ. ಸಂಗ್ರಹಿಸಲಾಗಿರುವ ಹಣದ ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಅನುಬಂಧ

ವಿವಧ ಮೂಲಗಳಿಂದ ತುಮಕೂರು ಜಿಲ್ಲಾ ರಂಗಮಂದಿರ ನಿರ್ಮಾಣಕ್ಕೆ ಸಂಗ್ರಹಿಸಿದ ಹಣದ ವಿವರ

1.	ಸರ್ಕಾರದ ವಂತಿಗೆ	27.56 ಲಕ್ಷ
2.	ಡಾ. ರಾಜ್‌ಕುಮಾರ್ ಸಂಗೀತ ಸಂಜೆ	23.00 ಲಕ್ಷ
3.	ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು	10.00 ಲಕ್ಷ
4.	ಜಿಲ್ಲಾ ಪಂಚಾಯತ್	7.00 ಲಕ್ಷ
5.	ನಗರಸಭೆ	1.00 ಲಕ್ಷ
6.	ಸಾರ್ವಜನಿಕ	9.87 ಲಕ್ಷ
7.	ಕೃಷಿ ಉತ್ಪನ್ನ ಮಾರುಕಟ್ಟೆ, ತಿಪಟೂರು	1.00 ಲಕ್ಷ
8.	ಕೃಷಿ ಉತ್ಪನ್ನ ಮಾರುಕಟ್ಟೆ ತುಮೂರು	0.30 ಲಕ್ಷ
9	ಕೃಷಿ ಉತ್ಪನ್ನು ಮಾರುಕಟ್ಟೆ,ತುಮಕೂರು	0.50 ಲಕ್ಷ
10.	ಜಿಲ್ಲಾಧಿಕಾರಿಗಳು, ತುಮಕೂರು	2,40 ಲಕ್ಷ
12.	ಜಿಲ್ಲಾ ಕೈಗಾರಿಕಾ ಸಹಕಾರ ಕೇಂದ್ರ ಬ್ಯಾಂಕ್, ತುಮಕೂರು	0.20 ಲಕ್ಷ
		82.83
	ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಇತರರಿಗೆ ಕೊಡಬೇಕಾದ ಬಾಕಿ ಮೊತ್ತ	7.17 ಲಕ್ಷ
	ಒಟ್ಟು ಮೊತ್ತ	90.00 ಲಕ್ಷ

ಶ್ರೀ ಟಿ.ಬಿ. ಜಯಚಂದ್ರ : ತಮ್ಮ ಉತ್ತರದಲ್ಲಿ 90 ಲಕ್ಷ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದೀರಿ. ಇತರೆ ಇಲಾಖೆಯಿಂದ ಬಂದಿರತಕ್ಕದ್ದು 27 ಲಕ್ಷ ರೂಪಾಯಿ ಎಂದು ಇದೆ. ನಾನು ಕೇಳತಕ್ಕದ್ದು, ವಿವಿಧ ಇಲಾಖೆಗಳಿಂದ ಅಂದರೆ ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು, ಜಿಲ್ಲಾ ಪಂಚಾಯತ್, ನಗರಸಭೆ, ಕೃಷಿ ಉತ್ಪಾದನಾ ಮಾರುಕಟ್ಟೆ, ಇವುಗಳಿಂದ ನೀವು ಸಂಗ್ರಹಿಸಿರತಕ್ಕ ಹಣ ಏನಿದೆ ಅದನ್ನು ಸರ್ವಾಜನಿಕರಿಂದ ಕಲೆಕ್ಟ್ ಮಾಡುತ್ತೀರಾ ಅಥವಾ ಬೇರೆ ಸಂಪನ್ಮೂಲದಿಂದ ಕೊಟ್ಟಿದ್ದೀರಾ? ಸಾರ್ವಜನಿಕರಿಂದ ಸಂಗ್ರಹಿಸಿದ್ದುದು ಎಂದು ಒಂದು ಕಲಂನಲ್ಲಿ ಇದೆ. 90 ಲಕ್ಷ ರೂಪಾಯಿಗಳನ್ನು ನೀವು ಸಂಗ್ರಹ ಮಾಡಿದ್ದೀರಿ. ಎಷ್ಟು ಬಂತು? ಎಷ್ಟು ಹೋಯಿತು? ಎಂಬುದಕ್ಕೆ ಲೆಕ್ಕಪತ್ರ ಇದೆಯೆ? ಅದರ ಬಗ್ಗೆ ವಿವರವನ್ನು ಕೊಡುತ್ತೀರಾ?

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಇದರ ಬಗ್ಗೆ ನಮಗೆ ಯಾವ ದೂರೂ ಬಂದಿಲ್ಲ. ಈಗಷ್ಟೇ ತಾವು ಹೇಳಿದ್ದೀರಿ. ಲೆಕ್ಕಪತ್ರ ಇಟ್ಟಿದ್ದಾರೋ ಎಂದು ಕೇಳಿದರಲ್ಲ, ಎಲ್ಲಾ ಲೆಕ್ಕಪತ್ರಗಳನ್ನು ಇಟ್ಟಿದ್ದಾರೆಂದು ತಿಳಿದುಬಂದಿದೆ. ಯಾವ ಯಾವ ಮೂಲಗಳಿಂದ ಸಂಗ್ರಹಿಸಿದ್ದಾರೆ ಎಂಬುದರ ಬಗ್ಗೆ ವಿವರವನ್ನು ಕೊಟ್ಟಿದ್ದೇನೆ. ಅದನ್ನು ಓದಬೇಕೆಂದರೆ ಓದಬಹುದು. ನಮಗೆ ಯಾವ ದೂರೂ ಬಂದಿಲ್ಲ. ಇನ್ನು ಮೇಲೆ ನಾವು ಇದನ್ನು ಬಹಳ ತೀವ್ರವಾಗಿ ಪರಿಶೀಲನೆಗೆ ಒಳಪಡಿಸಿ ಮುಂದಿನ ಸಾರಿ ತಮಗೆ ವರದಿ ಕಳುಹಿಸಿಕೊಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ನಿಮಗೆ ಎಂಬರಾಸೆ ಮೆಂಟಮಾಡಬೇಕೆಂದು ಇಲ್ಲ. ನಾನು ಕೇಳತಕ್ಕದ್ದು ನೀವು ವಿವಿಧ ಇಲಾಖೆಗಳಿಂದ ಸಂಗ್ರಹಿಸಿದ ಹಣವನ್ನು ಜಮಾ ಮಾಡಿದ್ದೀರಿ. ಅದರ ಬಗ್ಗೆ ನನ್ನ ತಕರಾರು ಇಲ್ಲ.ಅದನ್ನು ಸಾರ್ವಜನಿಕರಿಂದ ಸಂಗ್ರಹ ಮಾಡಿದರೋ ಅಥವಾ ಬೇರೆ ಯಾವ ಸಂಪನ್ಮೂಲದಿಂದ ಸಂಗ್ರಹಿಸಿದ್ದಿರೋ ಎನ್ನುವ ವಿವರ ನನಗೆ ಬೇಕು. ತಮಗೆ ಇರತಕ್ಕ ವರ್ತಮಾನ ಬೇರೆ ಇದೆ, ನನಗೆ ಬಂದಿರತಕ್ಕ ವರ್ತಮಾನ ಬೇರೆ ಇದೆ. ಅದನ್ನು ವಿಚಾರ ಮಾಡಿ ಹೇಳಿ. ಡಾ॥ರಾಜಕುಮಾರ್ ಸಂಗೀತ ಸಂಜೆ ಕಾರ್ಯಕ್ರಮದಿಂದ ಬಂದಿರತಕ್ಕದ್ದು 23 ಲಕ್ಷರೂಪಾಯಿ ಎಂದು ಹೇಳುತ್ತಿದ್ದೀರಿ. 23 ಲಕ್ಷ ರೂಪಾಯಿಗಳಿಂತ ಹೆಚ್ಚಿಗೆ ಹಣವನ್ನು ಸಂಗ್ರಹಿಸಲಾಗಿದ್ದುಅದರಲ್ಲಿ ಎಷ್ಟು ಖರ್ಚುಮಾಡಿದ್ದುದು ಎಂಬ ಬಗ್ಗೆ ಅಂಕಿಅಂಶ ನಿಮ್ಮಲ್ಲಿ ಇರಲೇಬೇಕು. ಆ ವಿವರವನ್ನೂ ನಮಗೆ ಕೊಡಿ ಇನ್ನೂ ನೀವು ರಂಗಮಂದಿರ ಪ್ರಾರಂಭವಾಯಿತು, ಕೆಲಸ ಮುಗಿಯಿತು ಎಂದು ತೃಪ್ತಿಪಟ್ಟು ಕೊಳ್ಳುವ ಹಾಗಿಲ್ಲ. ಸಾರ್ವಜನಿಕರಿಂದ ನಿಮ್ಮ ಇಲಾಖೆಯ ಅಧಿಕಾರಿಗಳು ಹಣ ಸಂಗ್ರಹ ಮಾಡಿದ್ದರಲ್ಲಿ ತೃಪ್ತಿಯಾಗಿದೆಯೇ ಎಂಬುದು ಮುಖ್ಯ 23 ಲಕ್ಷ ರೂಪಾಯಿಗಳು ಅಲ್ಲ. 60-70 ಲಕ್ಷ ರೂಪಾಯಿಗಳಷ್ಟು ಹಣ ಸಂಗ್ರಹವಾಗಿದೆ.

ನಿಷ್ಠೂರವಾಗಿ ಕ್ರಮಗಳನ್ನು ಕೈಗೊಂಡು ಹಣ ವಸೂಲ್ಮಾಡಬೇಕು, ಆ ರೀತಿ ವಸೂಲ್ಮಾಡಲಿಲ್ಲ. ಎಷ್ಟು ಖರ್ಚು ಮಾಡಿದ್ದಾರೆ, ಎಲ್ಲದಕ್ಕೂ ಲೆಕ್ಕಪತ್ರ ಇಟ್ಟಿದ್ದಾರೆಯೇ? ಇದು ಬಹಳ ಮುಖ್ಯವಾದುದ್ದು. 23 ಲಕ್ಷ ರೂಪಾಯಿಗಳು ಬಂದಿರುವುದು ಅಷ್ಟೇ ಅಲ್ಲ. ಕಲೆಕ್ಟ್ ಮಾಡಿರುವುದು ಎಷ್ಟು ಖರ್ಚಾಗಿರುವುದು ಎಷ್ಟು ಎಂಬುದು ನನಗೆ ಬೇಕು. ಲಾ ಅಂಡ್ ಆರ್ಡರ್‌ಗೋಸ್ಕರ 20 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರತಕ್ಕದ್ದು ಇದೆ. ಇದು ಸತ್ಯಕ್ಕೆ ದೂರವಾಗುತ್ತದೆ. ಇದೇ ರೀತಿ ಎಷ್ಟು ದುರುಪಯೋಗವಾಗಿದೆ? ದುರುಪಯೋಗದ ಬಗ್ಗೆ ಮಾಹಿತಿ ಬಂದಿಲ್ಲವೆಂದು ತಾವು ಆಗಲೇ ಹೇಳಿದ್ದೀರಿ. ಅದಕ್ಕೋಸ್ಕರ ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಇದರಲ್ಲಿ 90 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆಂದು ಹೇಳಿದ್ದೀರಿ. 90 ಲಕ್ಷಕ್ಕೆ ಇನ್ನೂ 90 ಲಕ್ಷ ಸೇರಿಸಿ ಸಾರ್ವಜನಿಕರಿಂದ ಸಂಗ್ರಹಿಸಿದ ಹಣ ಖರ್ಚಾಗಿದೆ. ಇಲ್ಲಿ ಮೋಸ ಆಗಿದೆ. ಇದರಲ್ಲಿ ಯಾವ ರೀತಿ ಮೋಸ ಆಗಿದೆ ಎಂದರೆ ಅಲ್ಲಿ ಏನು

ಷೀಟ್ ಹಾಕಿದ್ದಾರೆ ಅದನ್ನು ಪರ್ಚೇಸ್ ಮಾಡುವುದರಲ್ಲಿ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅವು 5 ಲಕ್ಷ ರೂಪಾಯಿ ಕೂಡ ಬೆಲೆ ಬಾಳುವುದಿಲ್ಲ ಅಲ್ಲಿ ಬಂದು ಉನ್ನತ ಮಟ್ಟದ ಸಮಿತಿ ಇದ್ದು, ಜಿಲ್ಲಾಧಿಕಾರಿಗಳೇ ಆ ಸಮಿತಿಯ ಸದಸ್ಯರಾಗಿದ್ದು ಇಷ್ಟರ ಮಟ್ಟಿಗೆ ದುರುಪಯೋಗವಾಗಿದೆ ಅಂದಾಗ ಇನ್ನೂ ಯಾವ ರೀತಿಯ ತನಿಖೆ ಮಾಡುತ್ತೀರಿ?

ಅಧ್ಯಕ್ಷರು : ನೀವು ಹಿರಿಯ ಸದಸ್ಯರಾಗಿ ಪ್ರಶ್ನೋತ್ತರ ವೇಳೆಯಲ್ಲಿ ಈ ರೀತಿ ಭಾಷಣ ಮಾಡಿದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ : ಸಾರ್ವಜನಿಕರ ದುಡ್ಡು ದುರುಪಯೋಗವಾಗುತ್ತಿರುವುದರ ಬಗ್ಗೆ ಹೆಚ್ಚಿನ ವಿಚಾರಣೆ ಆಗಲಿ, ಸತ್ಯಾಂಶ ಹೊರಬರಲಿ ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಮಾನ್ಯ ರಾಜಣ್ಣನವರ ಪ್ರಶ್ನೆಗೆ ಮಾನ್ಯ ಸಚಿವರು ಸಮಯ ಕೇಳಿದ್ದಾರೆ ಅವರಿಂದ ಉತ್ತರ ಬಂದನಂತರ ತೆಗೆದುಕೊಳ್ಳೋಣ, ದಯಮಾಡಿ ಸಹಕರಿಸಿ.

ಕರ್ನಾಟಕ ಸಕ್ಕರೆ ಕಾರ್ಖಾನೆಗಳು ಮತ್ತು ಜವಳಿ ಗಿರಣಿಗಳು

431 - ಶ್ರೀ ಮಂಜುನಾಥ್ ಸಿ. ಕರಿನ್ನೂರ (ಶಿಗ್ಗಾಂವ್) : ಮಾನ್ಯ ಸಕ್ಕರೆ ಹಾಗೂ ಜವಳಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆ ಹಾಗೂ ಜವಳಿ ಗಿರಣಿಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರಣೆ ನೀಡುವುದು)

ಆ) ಈ ಕಾರ್ಖಾನೆಗಳ ಲಾಭ ಹಾಗೂ ನಷ್ಟದ ಬಗ್ಗೆ ವಿವರ ನೀಡುವುದು

ಇ) ಹೊಸದಾಗಿ ಸಕ್ಕರೆ ಕಾರ್ಖಾನೆ ಹಾಗೂ ಜವಳಿ ಗಿರಣಿ ಪ್ರಾರಂಭಿಸಲು ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು ಹಾಗೂ ಅವು ಯಾವ ಹಂತದಲ್ಲಿವೆ.

ಈ) ಧಾರವಾಡ ಜಿಲ್ಲಾ ಸಂಗೂರ ಸಕ್ಕರೆ ಕಾರ್ಖಾನೆ ಎಷ್ಟು ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದೆ.

ಉ) ಸಂಗೂರ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಬೆಳೆಗಾರರಿಗೆ ಕಬ್ಬು ಪಡೆಯದೇ ರೈತರಿಗೆ ತೊಂದರೆಯಾಗಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ ಹಾಗೂ ಜವಳಿ ಸಚಿವರು) :

ಅ) ಜಿಲ್ಲೆಯಲ್ಲಿ ಒಟ್ಟು 30 ಕಾರ್ಖಾನೆಗಳು ಮತ್ತು 50 ಜವಳಿ ಗಿರಣಿಗಳು ಇವೆ. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

ಕ್ರಮ. ಸಂ	ಜಿಲ್ಲೆಯ ಹೆಸರು	ಸಕ್ಕರೆ ಕಾರ್ಖಾನೆ ಸಂಖ್ಯೆ	ಜವಳಿ ಗಿರಣಿಗಳು
1.	ಬೆಂಗಳೂರು	-	11
2.	ಮೈಸೂರು	3	9
3.	ಮಂಡ್ಯ	3	-
4.	ಹಾಸನ	1	-
5.	ದಕ್ಷಿಣ ಕನ್ನಡ	1	-